# ವಿದ್ಯಾರ್ಥಿಗಳಿಗಾಗಿ ವಿವೇಕಾನಂದರು

## ಶಕ್ತಿ



**ಶ**ಕ್ತಿ, ಶಕ್ತಿ. ಇದನ್ನೇ ನಾವು ಈ ಜೀವನದಲ್ಲಿ ಬಯಸುವುದು. ಏಕೆಂದರೆ, ಪಾಪ ಮತ್ತು ದುಃಖ ಎಂದು ನಾವು ಕರೆಯುವ ಎಲ್ಲಕ್ಕೂ ಒಂದು ಕಾರಣ ವಿರುವುದು. ಅದೆಂದರೆ ನಮ್ಮ ದೌರ್ಬಲ್ಯ. ದೌರ್ಬಲ್ಯ ದಿಂದ ಅಜ್ಞಾನ ಬರುತ್ತದೆ. ಅಜ್ಞಾನದಿಂದ ದುಃಖ ಉಂಟಾಗುತ್ತದೆ.



**ನ**ಮಗೆ ಬೇಕಾಗಿರುವುದು ಶಕ್ತಿ. ಆದ್ದರಿಂದ ನಿಮ್ಮಲ್ಲಿ ನಿಮಗೆ ನಂಬಿಕೆ ಇರಲಿ. ನಿಮ್ಮ ನರಗಳನ್ನು ಶಕ್ತಿಯುತವನ್ನಾಗಿ ಮಾಡಿಕೊಳ್ಳಿ. ನಮಗೆ ಬೇಕಾಗಿರುವುದು ಕಬ್ಬಿಣದ ಮಾಂಸಖಂಡಗಳು ಮತ್ತು ಉಕ್ಕಿನ ನರಗಳು. ನಾವು ಬಹಳಷ್ಟು ಅತ್ತಿರುವೆವು. ಇನ್ನು ಅಳುವುದು ಬೇಡ. ಅದಕ್ಕೆ ಬದಲಾಗಿ ಸ್ವಾವ ಲಂಬಿಗಳಾಗಿ; ನಿಜವಾದ ಅರ್ಥದಲ್ಲಿ ಮನುಷ್ಯರಾಗಿ.

**ಮೊ**ದಲು ನೀವು ಉತ್ತಮ ಪೌಷ್ಟಿಕ ಆಹಾರದಿಂದ ನಿಮ್ಮ ದೇಹವನ್ನು ಬೆಳೆಸಿಕೊಳ್ಳಬೇಕು. ಅನಂತರವಷ್ಟೇ ಮನಸ್ಸು ಶಕ್ತಿಶಾಲಿಯಾಗುವುದು. ಮನಸ್ಸೆಂಬುದು ದೇಹದ ಸೂಕ್ಷ್ಮ ಭಾಗವಲ್ಲದೆ ಮತ್ತೇನಲ್ಲ.

**ನೀ**ನು ಹೇಗೆ ಆಲೋಚಿಸುವೆಯೋ, ಹಾಗೆಯೇ ಆಗುತ್ತೀಯೆ. ನೀನು ದುರ್ಬಲನೆಂದು ಆಲೋಚಿಸಿದರೆ, ದುರ್ಬಲನೇ ಆಗುತ್ತೀಯೆ. ನೀನು ಸಬಲನೆಂದು ಆಲೋಚಿಸಿದರೆ, ಸಬಲನೇ ಆಗುತ್ತೀಯೆ. ನೀನು ಅಶುದ್ಧನೆಂದು ಆಲೋಚಿಸಿದರೆ, ಅಶುದ್ಧನೇ ಆಗಿಬಿಡುತ್ತೀಯೆ. ನೀನು ಪರಿಶುದ್ಧನೆಂದು ಆಲೋಚಿಸಿದರೆ, ಪರಿಶುದ್ಧನೇ ಆಗಿಬಿಡುತ್ತೀಯೆ. ಇದರಿಂದ ನಮ್ಮನ್ನು ನಾವು ದುರ್ಬಲರೆಂದು ಚಿಂತಿಸಬಾರದು, ಸಬಲರೆಂದು, ಸರ್ವಶಕ್ತ ರೆಂದು, ಸರ್ವವ್ಯಾಪಕರೆಂದು ಆಲೋಚಿಸ ಬೇಕು ಎನ್ನುವುದನ್ನು ಇದು ಬೋಧಿಸುವುದು.

**ಮಿ**ದುಳು ಮತ್ತು ಮಾಂಸಖಂಡಗಳು ಒಟ್ಟಿಗೇ ಬೆಳವಣಿಗೆ ಹೊಂದಬೇಕು. ಕಬ್ಬಿಣದ ನರಗಳು ಮತ್ತು ಬುದ್ಧಿಶಾಲಿ ಮಿದುಳು – ಇವನ್ನು ಹೊಂದಿದ್ದರೆ, ಇಡೀ ಪ್ರಪಂಚವೇ ನಿಮ್ಮ ಕಾಲಡಿಗೆ ಬಂದು ಬೀಳುವುದು.

**ಜ**ಗತ್ತಿಗೆ ನಾನು ಹೇಳಬಯಸುವುದು ಇದನ್ನೇ – ಶಕ್ತಿವಂತರಾಗಿರಿ! ಜೀವಿಸಿರುವ ಲಕ್ಷಣವೆಂದರೆ, ಶಕ್ತಿ ಮತ್ತು ಬೆಳವಣಿಗೆ. ದುರ್ಬಲತೆಯೆಂಬುದು ಸಾವಿನ ಲಕ್ಷಣ. ದುರ್ಬಲ ವಾಗಿರುವ ಎಲ್ಲದರಿಂದಲೂ ದೂರವಿರಿ. ಅದು ಮರಣವೇ ಸರಿ!

## ಯುವ ಕುಶಲೋಪರಿ

**ಪ್ರಶ್ನೆ : ಒಳ್ಳೆಯ ನಡವಳಿಕೆ ಅಥವಾ ಚಾರಿತ್ರ್ಯವನ್ನು ಬೆಳೆಸಿಕೊಳ್ಳುವುದು ಹೇಗೆ?**


**ಉತ್ತರ :** ಇದಕ್ಕೆ ತುಂಬ ಇಚ್ಛಾಶಕ್ತಿ ಬೇಕಾಗುತ್ತದೆ. ಮನಸ್ಸಿನ ಶಕ್ತಿಯನ್ನು ಪೋಲುಮಾಡದೆ, ಏಕಾಗ್ರಚಿತ್ತದಿಂದ ಒಳಿತಿನ ದಾರಿಯನ್ನೇ ಹಿಡಿಯುತ್ತೇನೆ ಎಂಬ ದೃಢಸಂಕಲ್ಪ ಬಹಳ ಮುಖ್ಯ. ಇಂತಹ ದೃಢನಿಶ್ಚಯವನ್ನು ಕೈಗೊಳ್ಳಬೇಕಾದರೆ, ವಿವೇಕಬುದ್ಧಿ ನಮ್ಮಲ್ಲಿ ಮೂಡಬೇಕು. ವಿವೇಕವೆಂದರೆ, ಒಳ್ಳೆಯದು ಯಾವುದು, ಕೆಟ್ಟದ್ದು ಯಾವುದು ಎಂಬ ವಿಷಯದಲ್ಲಿ ಸರಿಯಾದ ಪರಿಜ್ಞಾನ, ನಾವು ಮಾಡುವ ಕೆಲಸಗಳಿಗೆ ನಾವೇ ಜವಾಬ್ದಾರರು ಎಂಬ ಅರಿವು. ಇದು ಪ್ರಬಲವಾಗಿಲ್ಲದಿದ್ದರೆ ಕೆಟ್ಟದಾರಿ ಹಿಡಿಯುವ ಅಪಾಯ ಇದೆ. ನಿಶ್ಚಯಬುದ್ಧಿಗೆ ಶುದ್ಧ ಹಾಗೂ ಶಿಸ್ತುಬದ್ಧ ಮನಸ್ಸು ಅತ್ಯವಶ್ಯಕ. ಇದನ್ನು ಹೇಗೆ ಸಾಧಿಸಿಕೊಳ್ಳುವುದು? ಅದಕ್ಕಾಗಿ ಸ್ವಾಮಿ ವಿವೇಕಾನಂದರು ನಮಗೆ ಒಂದು ಮಾರ್ಗವನ್ನು ತೋರಿಸಿಕೊಟ್ಟಿದ್ದಾರೆ. ಮೊದಲು ನಾವು ನಮ್ಮ ಆಲೋಚನೆಗಳ ಬಗ್ಗೆ ಎಚ್ಚರಿಕೆಯಿಂದಿರಬೇಕು. ಯಾವತ್ತೂ ಸಾಧ್ಯವಾದಷ್ಟು ಒಳ್ಳೆಯ ಆಲೋಚನೆಗಳನ್ನೇ ಮಾಡಬೇಕು. ಜಾಗೃತರಾಗಿ ಇದ್ದುಕೊಂಡು, ಕೆಟ್ಟ ಆಲೋಚನೆಗಳನ್ನು ನಮ್ಮ ಮನಸ್ಸಿನಿಂದ ದೂರ ಸರಿಸಬೇಕು. ಇದನ್ನು ಚಿಕ್ಕಂದಿನಿಂದಲೇ ಅಭ್ಯಾಸ ಮಾಡಿದರೆ ಉತ್ತಮ, ಏಕೆಂದರೆ, "ಗಿಡವಾಗಿ ಬಗ್ಗದ್ದು, ಮರವಾಗಿ ಬಗ್ಗೀತೇ?" ಉತ್ತಮ ಆಲೋಚನೆಗಳು ನಮ್ಮ ಮನಸ್ಸಿನಲ್ಲಿ ಮೂಡಬೇಕಾದರೆ, ನಾವು ನೋಡುವ, ಕೇಳುವ, ಮಾತನಾಡುವ ಸಂಗತಿಗಳು ಉತ್ತಮವಾಗಿರಬೇಕು. ನಾವು ಏನನ್ನು ನಮ್ಮ ಇಂದ್ರಿಯಗಳ ಮೂಲಕ ಗ್ರಹಿಸುತ್ತೇವೆಯೋ, ಅವೇ ನಮ್ಮ ನಡವಳಿಕೆಯಾಗಿ ಅನಂತರ ಹೊರಗೆ ಕಾಣಿಸಿಕೊಳ್ಳುತ್ತವೆ. ಇದು ಸ್ವಾಮಿ ವಿವೇಕಾನಂದರು ನಮಗೆ ಹೇಳಿಕೊಡುವ ಮನೋವೈಜ್ಞಾನಿಕ ಸತ್ಯ. ಅದಕ್ಕಾಗಿಯೇ ಮಹಾತ್ಮ ಗಾಂಧಿಯವರು, 'ಕೆಟ್ಟದ್ದನ್ನು ಕೇಳಬೇಡ', 'ಕೆಟ್ಟದ್ದನ್ನು ನೋಡಬೇಡ' ಮತ್ತು 'ಕೆಟ್ಟದ್ದನ್ನು ಮಾತನಾಡಬೇಡ' ಎಂದು ಸೂಚಿಸುವ ಮೂರು ಕೋತಿಗಳ ಸಣ್ಣ ಪ್ರತಿಮೆಯೊಂದನ್ನು ತಮ್ಮ ಜೊತೆಗೆ ಇಟ್ಟುಕೊಂಡಿದ್ದರಂತೆ. ಒಳ್ಳೆಯ ಆಲೋಚನೆಗಳನ್ನೇ ಮಾಡುತ್ತ ಬಂದರೆ, ಅವೇ ಒಳ್ಳೆಯ ಕಾರ್ಯಗಳಾಗಿ ಹೊರಗೆ ಕಾಣಿಸಿಕೊಳ್ಳುತ್ತವೆ. ಅಂಥ ಒಳ್ಳೆಯ ಕಾರ್ಯಗಳನ್ನು ಮತ್ತೆ ಮತ್ತೆ ಮಾಡುವುದರಿಂದ ಒಳ್ಳೆಯ ಅಭ್ಯಾಸ ಮೂಡುತ್ತದೆ. ಒಳ್ಳೆಯ ಅಭ್ಯಾಸಗಳು ನಮ್ಮ ಮನಸ್ಸಿನಲ್ಲಿ ಒಳ್ಳೆಯ ಸಂಸ್ಕಾರಗಳನ್ನು ಅಥವಾ ಮುದ್ರೆಗಳನ್ನು ಉಂಟುಮಾಡುತ್ತವೆ. ಅಂಥ ಸಂಸ್ಕಾರಗಳ ಒಟ್ಟುಮೊತ್ತವನ್ನೇ 'ಚಾರಿತ್ರ್ಯ' ಎಂದು ಕರೆಯುವುದು ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಹೀಗಾಗಿ ನಾವು ಹೆಚ್ಚು ಹೆಚ್ಚು ಒಳ್ಳೆಯ ಸಂಸ್ಕಾರಗಳನ್ನು ಬೆಳೆಸಿಕೊಂಡರೆ, ಒಳ್ಳೆಯ ಚಾರಿತ್ರ್ಯವುಳ್ಳ ವ್ಯಕ್ತಿಗಳಾಗುತ್ತೇವೆ. ಆ ಮೂಲಕ ಸಮಾಜಕ್ಕೆ ಅಲಂಕಾರಪ್ರಾಯರಾಗುತ್ತೇವೆ. ಹಾಗೆ ಆಗೋಣವೇ? (ಬರಹ : ಸಂ.)

# ಸ್ವಾಮಿ ವಿವೇಕಾನಂದರ ಜೀವನದರ್ಶನ – ೬

**ನಿರೂಪಣೆ:** ಸ್ವಾಮಿ ರಾಘವೇಶಾನಂದ ; **ಅನುವಾದ :** ಸಿ.ಎಸ್.ಮಂಗಳಮ್ಮ; **ಮೂಲ ಕಲಾಕೃತಿ :** ಪದ್ಮಾ ವಾಸನ್; **ವರ್ಣಪಾರದರ್ಶಿಕೆ:** ಬಿ.ಕೆ.ಸೋಮಶೇಖರ

ಖೇತ್ರಿ ಮಹಾರಾಜರು ಸ್ವಾಮೀಜಿಯವರನ್ನು ಆಹ್ವಾನಿಸಿ, ಮುಂಬೈಯಿಂದ ಹೊರಡಲು ಹಡಗಿನ ಪ್ರಯಾಣಕ್ಕೆ ಬೇಕಾದ ಅನುಕೂಲತೆಗಳನ್ನು ಮಾಡಿಕೊಟ್ಟರು. ಸ್ವಾಮೀಜಿ ೧೮೯೩, ಮೇ ೩೧ರಂದು ಪ್ರಯಾಣ ಹೊರಟರು. ಚರಿತ್ರಾರ್ಹವಾಗಿ ಸ್ವಾಮಿ ವಿವೇಕಾನಂದರೆಂದು ಹೊಸ ಜಗತ್ತಿನಲ್ಲಿ ಪ್ರಸಿದ್ಧರಾದರು.










ಸ್ವಾಮೀಜಿಯವರ ವಯಸ್ಸು ಆಗ ಕೇವಲ ಮೂವತ್ತು! ಅವರು ಅನೇಕ ಅಡೆತಡೆಗಳನ್ನು ಎದುರಿಸಬೇಕಾಯಿತು. ಆದರೆ ದೇವರಲ್ಲಿದ್ದ ನಂಬಿಕೆ ಒಳ್ಳೆಯ ಫಲವನ್ನೇ ನೀಡಿತು. ಅನಿರೀಕ್ಷಿತವಾದ ಕಡೆಗಳಿಂದ ಸಹಾಯ ಒದಗಿ ಬಂದು, ಕೊನೆಗೂ ಸರ್ವಧರ್ಮ ಸಮ್ಮೇಳನದಲ್ಲಿ ಪ್ರತಿನಿಧಿಯಾಗುವ ಅವಕಾಶ ಸ್ವಾಮೀಜಿಗೆ ಒದಗಿತು.

ಶಿಕಾಗೋವಿನ ಆರ್ಟ್ಸ್ ಇನ್ಸ್‌ಟಿಟ್ಯೂಟ್‌ನಲ್ಲಿ ೧೮೯೩ ಸೆಪ್ಟೆಂಬರ್ ೧೧ ರಂದು ಸರ್ವಧರ್ಮ ಸಮ್ಮೇಳನ ಪ್ರಾರಂಭಗೊಂಡಿತು. ಸುಮಾರು ಏಳು ಸಾವಿರ ಜನ ಸಭಿಕರು ನೆರೆದಿದ್ದರು. ಉನ್ನತವಾದ ವೇದಿಕೆಯ ಮೇಲೆ ವಿವಿಧ ಧರ್ಮಗಳ ಪ್ರತಿನಿಧಿಗಳು ಆಸೀನರಾಗಿದ್ದರು. ಇವರುಗಳ ಮಧ್ಯೆ, ಹಳದಿ ಬಣ್ಣದ ಪೇಟ ಧರಿಸಿದ ಮತ್ತು ಸುಂದರ ವ್ಯಕ್ತಿತ್ವದ ಸ್ವಾಮಿ ವಿವೇಕಾನಂದರು ವಿಶೇಷವಾಗಿ ಎದ್ದುಕಾಣುತ್ತಿದ್ದರು. ಇಂತಹ ಗಣ್ಯ ಸಭಿಕರ ಮುಂದೆ, ಕೇವಲ ಮೂವತ್ತು ವರ್ಷದ ಯುವಸಂನ್ಯಾಸಿ ತಮ್ಮ ಉಪನ್ಯಾಸವನ್ನು ಕೊಡಬೇಕಾಗಿದ್ದಿತು. ಇತರರು ತಮ್ಮ ಭಾಷಣಗಳನ್ನು ಸಿದ್ಧಪಡಿಸಿಕೊಂಡು ತಂದಿದ್ದರು. ಆದರೆ ಸ್ವಾಮೀಜಿಯರು ಆ ರೀತಿ ಯಾವ ತಯಾರಿಯನ್ನೂ ಮಾಡಿಕೊಂಡು ಬಂದಿರಲಿಲ್ಲ! ಅಧ್ಯಕ್ಷರು ಉಪನ್ಯಾಸ ಮಾಡಬೇಕೆಂದು ಆಹ್ವಾನಿಸಿದಾಗ, ಇತರರ ಭಾಷಣಗಳ ನಂತರ ಮಾಡುವುದಾಗಿ ಪ್ರಾರ್ಥಿಸಿಕೊಂಡರು. ಹೀಗೆ ಕೆಲವು ಸಲ ಮುಂದೂಡಿದ ನಂತರ, ಕಡೆಗೆ ಅನಿವಾರ್ಯವಾಗಿ, ನೆರೆದ ಸಮೂಹದ ಮುಂದೆ ಭಾಷಣ ಮಾಡಲು ಎದ್ದುನಿಂತರು. ಆದರೆ ಈಗ ಅವರು ತಾವೇ ತಾವಾಗಿ ಇರಲಿಲ್ಲ, ಮೈಮರೆತಿದ್ದರು! ಈಗ ಅವರು ಭಾರತದ ಆತ್ಮವೇ ಆಗಿದ್ದರು; ರಾಮಕೃಷ್ಣರ ಪ್ರತಿಧ್ವನಿಯೇ ಆಗಿದ್ದರು. ಅಧ್ಯಾತ್ಮಜ್ಞಾನದ ಹರಿಕಾರರಾಗಿದ್ದರು. ಮನಸ್ಸಿನಲ್ಲಿ ವಿದ್ಯಾಧಿದೇವತೆ ತಾಯಿ ಸರಸ್ವತಿಯನ್ನು ಸ್ಮರಿಸುತ್ತ, ಆತ್ಮೀಯವಾಗಿ ಸಭಿಕರನ್ನು, **"ಅಮೆರಿಕದ ಸೋದರಿಯರೇ ಸೋದರರೇ!"** ಎಂದು ಸಂಬೋಧಿಸಿದರು. ಆ ಮಾತುಗಳು ಮಿಂಚಿನಶಕ್ತಿಯನ್ನು ಹೊಂದಿದ್ದವು. ಹೀಗಾಗಿ ಅವು ಎಲ್ಲರ ಹೃದಯವನ್ನೂ ಸ್ಫೂರ್ತಿಭರಿತವನ್ನಾಗಿ ಮಾಡಿದವು. ನೆರೆದಿದ್ದ ಏಳು ಸಾವಿರ ಮಂದಿ ಸಭಿಕರು ತಮ್ಮ ತಮ್ಮ ಆಸನಗಳಿಂದ ಎದ್ದುನಿಂತು, ನಿರಂತರವಾಗಿ ಎರಡು ನಿಮಿಷಗಳ ಕಾಲ ಕರತಾಡನ ಮಾಡಿದರು. ಸ್ವಾಮೀಜಿಯವರ ಮನಮುಟ್ಟುವ ಮಾತುಗಳು ಸಭಿಕರೆಲ್ಲರ ಮನದಾಳವನ್ನು ಹೊಕ್ಕು ಅಂತರ್ಮುಖಿಗಳನ್ನಾಗಿಸಿತು.






ಸ್ವಾಮಿ ವಿವೇಕಾನಂದರ ವಿಶ್ವಮಾನ್ಯ ಸಂದೇಶವು ಪ್ರತಿಯೊಬ್ಬ ವ್ಯಕ್ತಿಯನ್ನೂ ರೋಮಾಂಚನಗೊಳಿಸಿತು. ಭಾರತದ ಒಬ್ಬ ಅಪರಿಚಿತ ಯುವಸಂನ್ಯಾಸಿ, ಕೆಲವೇ ನಿಮಿಷಗಳಲ್ಲಿ, ಸುಪ್ರಸಿದ್ಧ ವ್ಯಕ್ತಿಯಾಗಿ ಕೀರ್ತಿಯ ಶಿಖರವನ್ನು ಏರಿಬಿಟ್ಟರು! ವಿಶೇಷ ವ್ಯಕ್ತಿಯೆಂದು ಅಮೆರಿಕದ ಸಾರ್ವಜನಿಕರಿಂದ ಕೊಂಡಾಡಲ್ಪಟ್ಟರು. ಹಾಗೂ ಅಧ್ಯಾತ್ಮಜ್ಞಾನದ ಶ್ರೇಷ್ಠ ಬೋಧಕರೆಂದೂ ಪರಿಗಣಿಸಲ್ಪಟ್ಟರು. ಅವರ ಆಳೆತ್ತರದ ಭಾವಚಿತ್ರಗಳು ಶಿಕಾಗೋ ನಗರದ ಬೀದಿಬೀದಿಗಳಲ್ಲಿ ಪ್ರದರ್ಶಿಸಲ್ಪಟ್ಟವು. ಹಾದಿಹೋಕರು ಅದರ ಮುಂದೆ ನಿಂತು, ತಲೆಬಾಗಿ ತಮ್ಮ ಗೌರವವನ್ನು ಸೂಚಿಸುತ್ತಿದ್ದರು. ಎಲ್ಲೆಲ್ಲಿಯೂ ಅವರ ಕುರಿತಾಗಿಯೇ ಮಾತುಕತೆಗಳು ನಡೆಯುತ್ತಿದ್ದವು.

